'ಕನ್ನಡಿಗರಿಗೀಗ ಬೇಕಿರುವುದು ಜಗತ್ತಿನೆಲ್ಲಾ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರೆದ ಬರವಣಿಗೆಯೋ ಅಥವಾ ಇಲ್ಲಿಯ ಮಣ್ಣಲ್ಲಿ ಮಾತ್ರ ಬೆಳೆಯಬಲ್ಲ ಪ್ರಾಂತೀಯ ವೃಕ್ಷವೋ?' ಎಂಬ ಅಭಿಪ್ರಾಯದ ಕುರಿತು ವೈದ್ಯರು, 'ಸಾಹಿತ್ಯದ ವ್ಯಾಖ್ಯೆಗೇ ಸವಾಲೆಸೆದಂತಿದೆಯಲ್ಲವೇ?' ಎಂದು ಹೇಳಿಕೊಂಡರು. ಪಂಪನ ಹಾಗೆ ಪ್ರಾದೇಶಿಕ ವೈಭವವೇ ಜಗತ್ತಾಗುವುದು ಮತ್ತು ಪ್ಯಾನ್‌ವರ್ಲ್ಡ್ ಬರೆಹಗಳನ್ನು ನಮ್ಮಲ್ಲಿಗೆ ಅನ್ವಯಿಸುವುದರ ವ್ಯತ್ಯಾಸ ವೈದ್ಯರಿಗೆ ಸ್ಪಷ್ಟವಿತ್ತು. ವಸುಧೇಂದ್ರರ ಆಯ್ಕೆ ಅವರ 'ತೇಜೋ ತುಂಗಭದ್ರಾ' ಕಾದಂಬರಿಯಲ್ಲಿದೆ.

ತಮ್ಮ ಕೃತಿಗಳ ಕುರಿತು ಬಂದ ಟೀಕೆಗಳನ್ನು ಅವರು ಮನಸಾರೆ ಸ್ವೀಕರಿಸುತ್ತಿದ್ದರು. ಅವರ ಕಥಾಸಂಕಲನ 'ರುದ್ರಪ್ರಯಾಗ'ವನ್ನು ಅನೇಕರು ತುಂಬ ಹೊಗಳಿ ಬರೆದಿದ್ದರು. ಒಂದೆರಡು ಲೋಪಗಳನ್ನೂ ಗುರುತಿಸಿದ್ದರು. 'ಕೃಷ್ಣಕ್ಕ ಮತ್ತು ಗುರಣ್ಣರ ಅಂತರಂಗ... ಓದುಗರಿಗೆ ದಕ್ಕುವಂತೆ, ಸುಸಾನ್‌ಳ ಅಂತರಂಗಕ್ಕೆ ಓದುಗನಿಗೆ ಪ್ರವೇಶವೇ ಇಲ್ಲದಿರುವುದು ಕಥೆಯಲ್ಲಿ ಕಾಣುವ ಮುಖ್ಯ ಲೋಪ...', 'ದತ್ತಕ ಕೊಂಡ ಗುರಣ್ಣನ ಬಗ್ಗೆ ಆಕೆಗಿದ್ದ ಇನ್‌ಡಿಫರೆನ್ಸ್ ಬದರೀನಾರಾಯಣನ ಸಮ್ಮುಖದಲ್ಲಿ ಪೂರಾ ಕರಗಿಹೋಗಿಬಿಡುವುದು ಆಕೆಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿನ ಅಥವಾ ಗುರಣ್ಣನ ಬಗೆಗಿನ ಆಕೆಯ ಯಾವುದೇ ಭಾವನೆಗಳ 'ಮೆಟಮಾರ್ಫಸಿಸ್' ಆಗಿ ನನಗೆ ಕಾಣಲಿಲ್ಲ. ಬದಲಿಗೆ... ಒಬ್ಬ ಮಾಧ್ವ ಮುದುಕಿಯ ದೈವಪರವಶತೆಯ ಒಂದು 'ಟ್ರಾನ್ಸ್' ಸ್ಥಿತಿಯಂತೆ ನನಗನ್ನಿಸಿತು...' ಮುಂತಾದ ಟೀಕೆಗಳು ವಿಮರ್ಶೆಯಲ್ಲಿ ಬಂದಿದ್ದವು. ಆ ಕುರಿತು ವೈದ್ಯರು ಸಮರ್ಥನೆಗೆ ಹೋಗದೆ 'ನನ್ನ ಬರಹಗಳು ಚರ್ಚೆಗೊಳಪಡುತ್ತಿರುವುದೇ ಒಂದು ಸಂತೋಷ' ಎಂದಿದ್ದರು. ಈ ಕುರಿತು ಅವರು ಹೇಳುವ ರೂಪಕಾನುಭವವಿದು: 'ಯಾಕೋ ಒಂದು ಹಳೆಯ ಘಟನೆ ನೆನಪಾಗುತ್ತಿದೆ. ಬಿ.ಎ. ಪರೀಕ್ಷೆಯಲ್ಲಿ ಹಿಸ್ಟರಿ ಪೇಪರ್ ಬರೆದಾದ ಮೇಲೆ ನಾನು ಸುಮಾರು 30 ಮಾರ್ಕ್ಸ್ ಬೀಳಬಹುದೆಂದು ತಿಳಿದಿದ್ದೆ. ನನಗೆ 60 ಮಾರ್ಕ್ಸ್ ಬಂದಿತ್ತು. ನನಗೆ ಸಂತೋಷವೇನೋ ಆಯಿತು, ಆದರೆ ಎಲ್ಲಾದರೂ ಟೋಟಲ್ ಮಿಸ್ಟೇಕ್ ಇರಲಿಕ್ಕಿಲ್ಲವೇ ಎಂಬ ಹೆದರಿಕೆ ಇಂದಿಗೂ ಕಾಡುತ್ತಿದೆ.'

'ಹಳ್ಳ ಬಂತು ಹಳ್ಳ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಹೊತ್ತಿಗೆ ಅವರು ಸಾಹಿತ್ಯದಲ್ಲೂ ವಯಸ್ಸಿನಲ್ಲೂ ಸಾಕಷ್ಟು ಹಿರಿಯರಾಗಿದ್ದರು. ಅವರಿಗೆ ಅನೇಕ ಹಿರಿಯ ಸಾಹಿತಿಗಳ ಸಂಗ ಬೆಳೆಯಿತು.

ಪ್ರಶಸ್ತಿ-ಪುರಸ್ಕಾರಗಳ ಕುರಿತು ಅವರ ಭಾವನೆ ವಿಷಾದದ್ದು: 'ಈ ಇಡೀ ವರುಷ ನಾಲ್ಕಾರು ಮುನ್ನುಡಿ ಬೆನ್ನುಡಿಗಳನ್ನು ಬರೆದುಕೊಡುವುದರಲ್ಲಿಯೇ ಹೋಯಿತು. ಉಳಿದಂತೆ ಮುಜುಗರವೆನ್ನಿಸುವಷ್ಟು ಸತ್ಕಾರಗಳು. ಇನ್ನೇನು ಈ ವರುಷದ ಪ್ರಶಸ್ತಿ ಪ್ರಕಟಿಸುವ ಸಮಯ ಬಂದಿದೆ. ಈ ಹೆಗಲೇರಿದ ಭೂತವನ್ನು ಯಾವಾಗ ಹೊಸಬರ ಹೆಗಲಿಗೆ ರವಾನಿಸಿ ಮುಕ್ತನಾದೇನೋ ಎಂದು ಕಾಯುತ್ತಿದ್ದೇನೆ.'

ಮುಂದೆ ಅವರ 'ಅಗ್ನಿಕಾರ್ಯ' ಪ್ರಕಟವಾಯಿತು. ಹಾಗೆಯೇ 'ಅಕ್ಷರ ಪ್ರಕಾಶನ'ದವರು 'ಮೊದಲ ಓದು' ಮಾಲಿಕೆಯಲ್ಲಿ ಅವರ ಕೆಲವು ಸಣ್ಣಕಥೆಗಳನ್ನು ಪ್ರಕಟಿಸಿದರು. ಅವರ ಯಾವುದೇ ಕೃತಿ ಬರಲಿ, ಅವನ್ನು ಸ್ನೇಹದ ಕಾಣಿಕೆಯೆಂದು ಕಳಿಸುತ್ತಿದ್ದರು. ಹಾಗೆಯೇ ಅವರ 'ಕಪ್ಪೆ ನುಂಗಿದ ಹುಡುಗ' ಪ್ರಕಟವಾಯಿತು. ಬ್ರಹ್ಮಾಂಡವಾದ ಆಲಸ್ಯ ತನ್ನನ್ನು ಆಕ್ರಮಿಸಿಕೊಳ್ಳುತ್ತಿದೆಯೆಂಬ ಭಯ ಅವರಿಗಿತ್ತು. ಒಂದು ಪತ್ರದಲ್ಲಿ 'ನನಗೆ ವಯಸ್ಸಾಗುತ್ತಿದೆ ಅಥವಾ ನಾನೊಬ್ಬ ಗೊಡ್ಡ!' ಎಂದಿದ್ದರು. ಅನುವಾದಕ್ಕೂ ತೊಡಗಿ ಮಾರ್ಕ್ವೆಜ್‌ನ ಕೃತಿಯ ಕನ್ನಡಾನುವಾದ 'ಕರ್ನಲ್‌ನಿಗೆ ಯಾರು ಬರೆಯುವುದೇ ಇಲ್ಲ'ವನ್ನು ಪ್ರಕಟಿಸಿದರು. 'ಇನ್ನೊಂದು ಸಂತೆ' ಅವರ ಕೊನೆಯ ಕೃತಿ.

ಮರೆಯಲಾರದ ಒಂದೆರಡು ಪ್ರಸಂಗಗಳನ್ನು ಹೇಳುತ್ತೇನೆ. ನನ್ನ ಹಿರಿಯ ಮಗ ಅಭಿಷೇಕ ಅವರಲ್ಲಿಗೆ ಆಗಾಗ ಹೋಗುತ್ತಿದ್ದ. ವೈದ್ಯರು ಸಂಘಟಿಸಿದ್ದ ಒಂದು ಪಾರ್ಟಿಯಲ್ಲಿ ಅನೇಕ ಹಿರಿಯರು ಈ ದೇಶಕ್ಕೆ ಭವಿಷ್ಯವಿಲ್ಲವೆಂಬ ಧಾಟಿಯಲ್ಲಿ ಸಿನಿಕತನದಲ್ಲೆ ಮಾತಾಡುತ್ತಿದ್ದರು. ನನ್ನ ಮಗ ಅದನ್ನೆಲ್ಲ ಸ್ವಲ್ಪ ಹೊತ್ತು ಕುಳಿತು ಕೇಳಿ ಬಳಿಕ ಗಟ್ಟಿಧ್ವನಿಯಲ್ಲಿ, 'ಸಾಕು ನಿಮ್ಮ ಈ ಮಾತು, ಏನೂ ಇಲ್ಲ, ಎನ್ನುತ್ತಲೇ ಇರುತ್ತೀರಲ್ಲ, ನೀವೇನು ಸಾಧಿಸಿದಿರಿ? ನನ್ನಂತಹ ಹೊಸ ತಲೆಮಾರಿಗೆ ಇದೇ ಭರವಸೆಯನ್ನು ನೀವು ನೀಡುತ್ತೀರಾ? ನಿಮ್ಮಿಂದ ಆಗುತ್ತಿಲ್ಲವೆಂದು ಒಪ್ಪಿಕೊಳ್ಳಿ, ಈ ಸಿಂಡ್ರೋಮ್ ನಿಮಗಿರಲಿ, ನಮಗೆ ಬೇಡ' ಎಂದು